# People's Union for Civil Liberties – Karnataka

*Contact address: Ramdas Rao, 59 (II Floor) Shivaji Raod, Shivaji Nagar, Bangalore 560051*

*Email: puclblr@gmail.com* *Mobile no: 94490 11530*

**(Founder: Jai Prakash Narayan)**


---

ಮಾನ್ಯ ಸಂಪಾದಕರು,
ಸುದ್ದಿ ವಿಭಾಗ

## ಅಮ್ನೆಸ್ಟಿ ಇಂಟರ್ ನ್ಯಾಷನಲ್ ದೇಶದ್ರೋಹಿ / ರಾಜ್ಯ ದ್ರೋಹಿಯೇ?

### ಪತ್ರಿಕಾ ಹೇಳಿಕೆ

ಅಮ್ನೆಸ್ಟಿ ಇಂಟರ್ ನ್ಯಾಷನಲ್ ಒಂದು ಅಂತರರಾಷ್ಟ್ರೀಯ ಮನ್ನಣೆ ಪಡೆದಿರುವ ಸಂಸ್ಥೆ. ರಾಜಕೀಯೇತರ ಸಂಸ್ಥೆಯಾದ ಅದಕ್ಕೆ ಸಾವಿರಾರು ಸದಸ್ಯರಿದ್ದು, ಯಾವುದೇ ರಾಜಕೀಯ ಪಕ್ಷಕ್ಕೆ ಸೇರದ ಅನೇಕಾನೇಕ ಸದಸ್ಯರು ಕೆಲಸ ಮಾಡುತ್ತಿದ್ದಾರೆ. ಈ ಸಂಸ್ಥೆ ಕಳೆದ ಶನಿವಾರ ಬೆಂಗಳೂರಿನಲ್ಲಿ ಸಮಾವೇಶದ ಸಂಬಂಧ ರಾಜ್ಯ ದ್ರೋಹದ ಆರೋಪಕ್ಕೆ ಗುರಿಯಾಗಿದೆ. ಅದು ಬೆಂಗಳೂರಿನ ಯುನೈಟೆಡ್ ಥಿಯೊಲಾಜಿಕಲ್ ಕಾಲೇಜಿನಲ್ಲಿ ಕಾಶ್ಮೀರದಲ್ಲಿ "ಕಣ್ಮರೆಯಾದ ಮಕ್ಕಳ ಪಾಲಕರ" ಸಮಾವೇಶವನ್ನು "ಬ್ರೋಕನ್ ಫ್ಯಾಮಿಲಿ" ಎಂಬ ಹೆಸರಿನಲ್ಲಿ ಸಂಘಟಿಸಿತ್ತು. ಸದರಿ ಕಾರ್ಯಕ್ರಮದಲ್ಲಿ ಸುಪ್ರಸಿದ್ಧ ಪತ್ರಕರ್ತರು ಮತ್ತು ಬುದ್ದಿಜೀವಿಗಳು ಭಾವಹಿಸಿದ್ದರು. ಮಾನವ ಹಕ್ಕುಗಳ ಉಲ್ಲಂಘನೆಯ ವಿವರಗಳನ್ನು ಮಂಡಿಸಿದ ನಂತರ ಸಭೆಯ ಕೊನೆಯಲ್ಲಿ ಕೆಲವರು ಭಾರತ ವಿರೋಧಿ ಮತ್ತು ಭಾರತ ಸೈನ್ಯದ ವಿರೋಧಿ ಘೋಷಣೆಗಳನ್ನು ಕೂಗಿದರು. ಇದಕ್ಕೆ ಪ್ರತಿಯಾಗಿ ಬಲಪಂಥೀಯ ಗುಂಪುಗಳಿಂದ ಘೋಷಣೆ ಬಂದವು. ಅದೇದಿನ ರಾತ್ರಿ ಕಾಲೇಜಿನ ವಿರುದ್ಧ ಎಬಿವಿಪಿ ಯಿಂದ ದೂರು ದಾಖಲಿಸಲಾಯಿತು. ಭಾನುವಾರ ಮಿಲ್ಲರ್ಸ್ ರಸ್ತೆಯ ಯುಟಿಸಿ ಕಾಲೇಜಿನ ಮುಂದೆ ಎಬಿವಿಪಿ ಯಿಂದ ಪ್ರತಿಭಟನೆ ನಡೆದು ಸಂಘಟಕರನ್ನು ಬಂಧಿಸುವಂತೆ ಆಗ್ರಹಿಸಲಾಯಿತು. ಆ ಸಂದರ್ಭದಲ್ಲಿ ಪೊಲೀಸರು ಪ್ರಥಮ ಮಾಹಿತಿ ದಾಖಲಾತಿ ವರದಿ ದಾಖಲಿಸಿರಲಿಲ್ಲ. ಕಾನೂನು ಪಂಡಿತರ ಸಲಹೆ ಪಡೆಯುವುದಾಗಿ ಹೇಳಲಾಗಿತ್ತು. ಅಗಷ್ಟ 15 ಸ್ವಾತಂತ್ರ್ಯ ದಿನವಾದ ಸೋಮವಾರ ಜೆಸಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಪ್ರಥಮ ಆರೋಪಿಯನ್ನಾಗಿ ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಎಂದು ಹೆಸರಿಸಲಾಯಿತು. ಅದರಲ್ಲಿ ರಾಜ್ಯದ್ರೋಹ ಮತ್ತು ಇತರ ಆರೋಪಗಳ ಮೇಲೆ ಪ್ರಕರಣ ದಾಖಲಿಸಲಾಗಿದೆ. ಈಗ ಗೃಹ ಮಂತ್ರಿಗಳು ಆಧಾರಗಳಿದ್ದರೆ ಮಾತ್ರ ಪ್ರಕರಣದಲ್ಲಿ ಆರೋಪ ಪಟ್ಟಿ ದಾಖಲಿಸಲಾಗುವುದು ಎಂದು ಹೇಳಿದ್ದಾರೆ. ಏನೇ ಆದರೂ, ಈ ಘಟನೆಯಿಂದಾಗಿ ಕೆಲವು ಬಗೆ ಪ್ರಶ್ನೆಗಳ ಬಗ್ಗೆ ಪ್ರಜ್ಞಾವಂತರು ಮತ್ತು ಮಾನವ ಹಕ್ಕುಗಳ ಹೋರಾಟಗಾರರು ಗಮನ ಹರಿಸಬೇಕಿದೆ.

ಪ್ರಥಮವಾಗಿ ಕರ್ನಾಟಕ ಸರಕಾರ ಆರ್‌ಎಸ್‌ಎಸ್ ಮತ್ತು ಬಿಜೆಪಿ ಒತ್ತಡಕ್ಕೆ ಮಣಿದು ಅಂತರರಾಷ್ಟ್ರೀಯ ಮಾನ್ಯತೆ ಪಡೆದ ಸಂಸ್ಥೆಯ ಮೇಲೆ ರಾಜ್ಯದ್ರೋಹದ ಕೇಸ್ ದಾಖಲಿಸಿ ಕೋಮುವಾದಿಗಳನ್ನು ಓಲೈಸುತ್ತಿದೆಯೇ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತಿದೆ. ಆ ದಿನದ ಸಭೆಯಲ್ಲಿ ಕಾಶ್ಮೀರಿ ಕುಟುಂಬಗಳ ಕಥೆಯನ್ನು ಕೇಳಿದ ನಂತರ ಕಾಶ್ಮೀರಿ ಪಂಡಿತರಿಗೂ ಮಾತನಾಡಲು ಅವಕಾಶ ನೀಡಲಾಗಿತ್ತು. ಕೆಲವು ಕಾಶ್ಮೀರಿ ವಿದ್ಯಾರ್ಥಿಗಳು ಆಜಾದಿ ಘೋಷಣೆಗಳನ್ನು ಕೂಗಿದರೆನ್ನಲಾಗಿದೆ. ಆಜಾದಿ ಘೋಷಣೆ ಕೂಗಿದ ಮಾತ್ರಕ್ಕೆ ರಾಜ್ಯ ದ್ರೋಹ ಎನ್ನುವುದಾದರೆ, ಇಡೀ ಕಾಶ್ಮೀರ ಕಣಿವೆ ಜನರನ್ನು ಸಾರಾಸಗಟಾಗಿ ಜೈಲಿಗೆ ತಳ್ಳಬೇಕಾಗುತ್ತದೆ. ಏಕೆಂದರೆ ಆಜಾದಿ ಎನ್ನುವ ಪದ ಅನೇಕರಿಗೆ ಅನೇಕ ಅರ್ಥ ನೀಡುತ್ತದೆ. ಸಾಮಾನ್ಯ ಜನರಿಗೆ ಯಾವುದೇ ಮಿಲಿಟರಿ ಮಧ್ಯೆ ಪ್ರವೇಶವಿಲ್ಲದ ಶಾಂತಿಯುತ ಸಾಮಾನ್ಯ ಬದುಕೇ ಅಜಾದಿ ಎಂಬ ಅರ್ಥವೂ ಇದೆ. ಗತ ವಸಾಹತುಶಾಹಿಯ ಕಾಲ 1860 ರ ರಾಜ್ಯದ್ರೋಹ ಕಾನೂನಿಲ್ಲೂ ಪ್ರಭುತ್ವವನ್ನು ಕಾನೂನುಬಾಹಿರವಾಗಿ ಬುಡಮೇಲು ಮಾಡುವ ಅಥವ ಸಶಸ್ತ್ರ ದಂಗೆಗೆ ಕರೆನೀಡಿದಾಗ ಮಾತ್ರ ರಾಜ್ಯದರೋಹ ಎಂದು ಹೇಳಲಾಗಿದೆ. ಘೋಷಣೆ ಕೂಗುವುದು ಇದರಲ್ಲಿ ಸೇರಿಲ್ಲ. ಅಮ್ನೆಸ್ಟಿ ತನ್ನ ವಿವರಣೆಯಲ್ಲಿ ತಮ್ಮ ಯಾವ ಸದಸ್ಯರೂ ರಾಜ್ಯ ವಿರೋಧಿ ಘೋಷಣೆ ಕೂಗಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಆದರೂ, ಅಮ್ನೆಸ್ಟಿಯನ್ನೆ ಪ್ರಥಮ ಆರೋಪಿಯನ್ನಾಗಿಸಿರುವುದು ನ್ಯಾಯ ಸಮ್ಮತವಲ್ಲ. ತಮ್ಮ ವಿರೋಧಿಗಳನ್ನು ರಾಷ್ಟ್ರ ವಿರೋಧಿ ಎಂದು ಹೇಳಿ ಹೀನ ರಾಜಕೀಯ ಮಾಡುವುದೇ ಕೋಮುವಾದಿಗಳ ಚಾಳಿಯಾಗಿದೆ. ಅಮ್ನೆಸ್ಟಿ "ರಾಷ್ಟ್ರದ್ರೋಹಿ" ಇದು ಬಿಜೆಪಿ ಅಂಗಸಂಸ್ಥೆಗಳ ರಾಜಕೀಯ ಆರೋಪ ಅದನ್ನು ರಾಜಕೀಯವಾಗಿಯೇ ಪರಿಗಣಿಸಬೇಕಿತ್ತು. ಬದಲಾಗಿ ಪೊಲೀಸರು ಕೂಡಲೇ ರಾಜ್ಯದ್ರೋಹದ ಪ್ರಕರಣ ದಾಖಲಿಸಿರುವುದು ಕಾಂಗ್ರೆಸ್ ಸರಕಾರ ಬಿಜೆಪಿಯನ್ನು ಓಲೈಸಲಿಕ್ಕೆ ಮಾಡಿದ ಕೆಲಸವೆಂದು ತಿಳಿಯುವುದು ಅನಿವಾರ್ಯವಾಗುತ್ತದೆ.

ಈ ಹಿಂದೆ ರೋಹಿತ್ ವೇಮುಲ ಮೇಲೂ ಸಹ ಸುಳ್ಳು ದೂರು ಹಾಕುವುದರಿಂದಲೇ ಕೋಮುವಾದಿಗಳ ದಲಿತರ ಮೇಲೆ ಚಿತ್ರಹಿಂಸೆ ಪ್ರಾರಂಭವಾಯಿತು. ಅದೇ ರೀತಿ ಜೆಎನ್‌ಯು ನ ಕನ್ನಯ್ಯ ಕುಮಾರ್ ಮತ್ತಿತರರ ಮೇಲೂ ಇದೆ ತಂತ್ರ ಅನುಸರಿಸಲಾಯಿತು. ದೇಶಾದ್ಯಂತ ಕೋಮುವಾದಿಗಳ ತಂತ್ರದ ಉದ್ದೇಶ ಮಾನವ ಹಕ್ಕುಗಳ ಹೋರಾಟಗಾರರು ಮತ್ತು ಅಮ್ನೆಸ್ಟಿ ಯಂತಹ ಮಾನವ ಹಕ್ಕುಗಳ ಸಂಸ್ಥೆಗಳನ್ನು ಕರಾಳ ಕಾನೂನುಗಳ ಚಿತ್ರ ಹಿಂಸೆಗೆ ಒಳಪಡಿಸಬೇಕೆಂಬುದೇ ಆಗಿದೆ. ಏಕೆಂದರೆ ಕಾನೂನಿನ ಪ್ರಕ್ರಿಯೆ ಈ ದೇಶದಲ್ಲಿ ಶಿಕ್ಷೆ ಆಗಿದೆ.

ಕರ್ನಾಟಕ ಸರಕಾರ ಇಂತಹ ಕೋಮುವಾದಿಗಳ ಇಂತಹ ಕೋಮುವಾದಿಗಳ ಪಿತೂರಿಗೆ ಬಲಿಯಾಗಿ ಆತುರದ ಕ್ರಮ ತೆಗೆದುಕೊಳ್ಳುವ ಓಲೈಕೆಯ ಪ್ರವೃತ್ತಿಯನ್ನು ಕೈಬಿದಬೇಕೆಂದು ಪಿಯುಸಿಎಲ್ – ಕರ್ನಾಟಕ ಒತ್ತಾಯಿಸುತ್ತದೆ. ತಮ್ಮ ಸೈದ್ಧಾಂತಿಕ ವಿರೋಧಿಗಳನ್ನು ರಾಜಕೀಯವಾಗಿ ಎದುರಿಸುವ ಬದಲಾಗಿ ಕರ್ನಾಟಕದಲ್ಲಿ ಮಾನವ ಹಕ್ಕು ಸಂಸ್ಥೆಗಳಿಗೆ ವಿಘ್ನಗಳನ್ನು ಮಾಡುವ ಕಾರ್ಯದಲ್ಲಿ ತೊಡಗಿರುವ ಬಲಪಂಥೀಯ ಉನ್ಮಾರಗಳನ್ನು ಮಾನ್ಯ ಮಾಡಬಾರದೆಂದು ಸಿದ್ದರಾಮಯ್ಯ ಸರಕಾರವನ್ನು ಪಿಯುಸಿಎಲ್ ಮತ್ತೊಮ್ಮೆ ಒತ್ತಾಯಿಸುತ್ತದೆ.

ಧನ್ಯವಾದಗಳೊಂದಿಗೆ,

ಪ್ರೊ. ವೈ. ಜೆ ರಾಜೇಂದ್ರ
ಅಧ್ಯಕ್ಷ, ಪಿಯುಸಿಎಲ್ – ಕರ್ನಾಟಕ
ದೂರವಾಣಿ: 94490 11530

ಡಾ. ವಿ. ಲಕ್ಷ್ಮೀನಾರಾಯಣ
ರಾಷ್ಟ್ರೀಯ ಕಾರ್ಯದರ್ಶಿ, ಪಿಯುಸಿಎಲ್ – ಇಂಡಿಯ
ದೂರವಾಣಿ 94803 26622